ತಂದಿದ್ದು ಎಂದರೆ, ಇಂಥ ಘಟನೆ ಚಿಕ್ಕಮಗಳೂರಿನಲ್ಲಿ ನಡೆದಿದೆ. ಈಗಾಗಲೇ ಸಿದ್ದರಾಮಯ್ಯನವರು, ರಮೇಶ್ ಕುಮಾರ್‌ರವರು ಎಲ್ಲರೂ ಕೂಡ ಪ್ರಸ್ತಾಪಿಸಿದ್ದಾರೆ. ಅಮಾಯಕರ ಹತ್ಯೆಯಾಗಿದೆ. ಅಮಾಯಕರ ಹತ್ಯೆ ಆಗತಕ್ಕಂಥದ್ದರ ಬಗ್ಗೆ ಸುಳಿವು ಸಿಗಲಿಲ್ಲ. ಮತ್ತೆ ನಕ್ಸಲೈಟ್ ಆಕ್ಟಿವಿಟೀಸ್ ನಡೆಯತಕ್ಕಂಥ ಕಾಲದಲ್ಲಿ They have taken this step, what is going to happen. ಸರ್ಕಾರ ಸೂಕ್ಷ್ಮತೆಯಿಂದ ಅದರ ಬಗ್ಗೆ ತಿಳಿದುಕೊಂಡು ಈ ರೀತಿಯಾದ ಘಟನೆಗಳು ಆಗದಂತೆ ನೋಡಿಕೊಳ್ಳಬೇಕಾಗುತ್ತದೆ. ಅಲ್ಲಿ ಸತ್ತಿರುವ ಅಮಾಯಕರ ಬಗ್ಗೆ ಸ್ಪಷ್ಟವಾದ ಉತ್ತರ ನಿಮ್ಮಿಂದ ಬಂದಿಲ್ಲ. ಮತ್ತೆ ಅಲ್ಲಿ ಏನಾಗಿದೆ ಎಂಬುದರ ವರದಿ ಕೂಡ ನಿಮ್ಮಲಿಲ್ಲ. ಇದನ್ನು ಏತಕ್ಕೆ ಕೇಳಿದ್ದೇವೆಂದರೆ, ಇಂಥ ಒಂದು ಘಟನೆ ನಡೆದಂಥ ಕಾಲದಲ್ಲಿ ನಾವಿ ವಿರೋಧಪಕ್ಷದಲ್ಲಿ ಕುಳಿತಿರುವಾಗ ಕೇಳತಕ್ಕಂಥದ್ದು ನಮ್ಮ ಕರ್ತವ್ಯವಾಗಿರುತ್ತದೆ. ಇದು ಏತಕ್ಕೆ ಆಯಿತು, ಇದಕ್ಕೆ ಸರ್ಕಾರ ಏನು ಉತ್ತರ ಕೊಟ್ಟಿದೆ ಎನ್ನತಕ್ಕಂಥದ್ದರ ಬಗ್ಗೆ ಸಾಮಾನ್ಯ ಜನರು ನಾಳೆ ದಿವಸ ಪತ್ರಿಕೆಗಳಲ್ಲಿ ಓದುತ್ತಾರೆ. ಇವತ್ತು ತಮ್ಮ 67ನೇ ಹುಟ್ಟು ಹಬ್ಬದ ದಿವಸ. ಆದ್ದರಿಂದ, ನಿಮ್ಮ ಮನಸ್ಸನ್ನು ಕೆಡಿಸುವುದಕ್ಕೆ ನಾವು ಬಯಸುವುದಿಲ್ಲ. You are a very good Parliamentarian. ಆದರೆ, ಇವತ್ತು ಕೊಂದು ಹಾಕಿರುವ ಅಮಾಯಕರ ಬಗ್ಗೆ ನ್ಯಾಯ ಕೊಡತಕ್ಕಂಥದ್ದರಲ್ಲಿ ಈ ರಾಜ್ಯದ ಗೃಹ ಸಚಿವರಾಗಿರುವ ತಮ್ಮಿಂದ ಸ್ಪಷ್ಟವಾದ ಉತ್ತರ ಸಿಗುತ್ತಿಲ್ಲ. ಆದ್ದರಿಂದ, ನಾವು ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಆರಗ ಜ್ಞಾನೇಂದರ: ಶೇಷೇಗೌಡರು ಮತ್ತು ವೆಂಕಟೇಶ್ ಬಗ್ಗೆ ನಿಮ್ಮದು ಸಭಾತ್ಯಾಗ ಆಗಿರಲಿಲ್ಲ. ಅವರ ಜೀವಕ್ಕೆ ಬೆಲೆಯೇ ಇಲ್ಲ.

(ಗೊಂದಲ)